ಶ್ರೀ ಜೆ. ಎಂ. ಕಬಾಡೆ.—ಈ ಆರ್ಡಾಕ್ ತರುವವರು ಯಾರು ? ಅದನ್ನು ಸ್ಪಷ್ಟ ಮಾಡಬೇಕು ಸಪ್ಲೈ ಮಾಡುವವರು ಯಾರು ? ಕಂಟ್ರಾಕ್ಟ್ ಯಾರಿಂದ ತೆಗೆದುಕೊಳ್ಳುತ್ತಾರೆ ಎಂಬುದನ್ನು ಹೇಳಬೇಕು.

MR. DEPUTY SPAKER.—The Hon. Minister has replied that the Government is not manufacturing but the supply is controlled by them.

ಶ್ರೀ ಎಸ್. ಎಂ. ಯೂಹ್ಯಾ.—We have given even transporation to others. ಈಗ ಇದನ್ನು ನ್ಯಾಷನಲೈಸ್ ಮಾಡುವುದು ಸರ್ಕಾರಕ್ಕೆ ಸೂಕ್ತವಲ್ಲ ಎಂದು ತೋರುತ್ತದೆ. ಇದರಿಂದ ಬಹಳಷ್ಟು ಬಡವರಿಗೆ, ಕಾರ್ಮಿಕರಿಗೆ ತೊಂದರೆಯಾಗುತ್ತದೆ ಎಂದು ಮಾನ್ಯ ಶೀರನಾಳ ಚಂದ್ರಶೇಖರವರು, ಮಾನ್ಯ ಲಿಂಗಸ ನವರು ಹೇಳಿದರು, ವಿದ್ಯಾವಂತರು, ಶ್ರೀಮಂತರು ಕುಡಿಯಬೇಕು ಎಂದರೆ this is another contradiction. After all, poor people imitate the rich people and the educated people. Therefore, one of the points in 12 point programme is the leaders, the educated and the others should be model example to others. This is very much essential. I would say the rich people should not drink first. The educated should not drink first; and the leaders should not drink first so that the poor people may also imitates the higher hierarchy. ಆದ್ದರಿಂದ ಇವೊತ್ತು ನಾವು ವಿದ್ಯಾವಂತರಿಗಾಗಲಿ, ಸಮಾಜದಲ್ಲಿ ದುಡಿಯುವರಾಗಲಿ, ನಾಯಕರಾಗಲಿ, ಕುಡಿಯಲಿಲ್ಲ ಎಂದರೆ ಬಡ ಜನರು ಕುಡಿಯುವುದಿಲ್ಲ ಇವೊತ್ತು ಬಡ ಜನರು ನಮ್ಮ ಮಾಲೀಕ ಕುಡಿಯುತ್ತಾನೆ ಎಂದು ಅವರು ಕುಡಿಯುತ್ತಾರೆ, ಅದಕ್ಕಾಗಿ ಈಗ ಇರತಕ್ಕ ೧೨ ಅಂಶಗಳಲ್ಲಿ ದೊಡ್ಡ ಅಂಶ ಎಂದರೆ ನಾವೆಲ್ಲಾರೂ ಕುಡಿಯಬಾರದು ಎಂದು, ಅದನ್ನು ನಾವು ಯೋಚನೆ ಮಾಡಬೇಕು, ಈ ಪ್ರಾಹಿಬಿಷನ್, ಟೋಟಲ್ ಪ್ರೊಹಿಬಿಷನ್ ಜಾರಿಗೆ ತರುವಾಗ ಸಮಾಜಕ್ಕೆ ಮಾರ್ಗದರ್ಶಕರಾಗಿರಬೇಕು, ಅದು ೧೨ ಪಾಯಿಂಟ್ಸ್‌ನಲ್ಲಿ ಒಂದು ಪಾಯಿಂಟ್ ಇದೆ. ಈ ಒಂದು ವಾತಾವರಣ ಸುಧಾರಣೆಯಾಗಬೇಕು. ಈ ಒಂದು ವಾತಾವರಣ ಸುಧಾರಣೆಯಾಗದೆ ಒರೀ ಕಾನೂನು ಮುಖಾಂತರ ಪ್ರಾಹಿಬಿಷನ್ ಜಾರಿಗೆ ತಂದರೆ ದೇಶಕ್ಕೆ ಹಾನಿಯಾಗುತ ದೆ, ಸಮಾಜಕ್ಕೂ ಹಾನಿಯಾಗುತ್ತದೆ. ಏಕೆಂದರೆ ನಾವು ಕಾನೂನನ್ನು ಮಾಡಬಹುದು, ನಮ್ಮ ರಾಜ್ಯದಲ್ಲಿ ಪ್ರೊಹಿಬಿಷನ್ ಆ ಇದೆ ಅದನ್ನು ಎಲ್ಲಾ ಡಿಸ್ಟ್ರಿಕ್ಟ್‌ನಲ್ಲಿ ೧೯೬೭ರಲ್ಲಿ ತೆಗೆದುಹಾಕಿದ್ದಾರೆ ಅದನ್ನು ಇಂಪೋಸ್ ಮಾಡಬಹುದು, ಅದನ್ನು ಮಾಡಿದರೆ ಈ ಕಾನೂನಿಂದ ಈ ಒಂದು ದೊಡ್ಡ ಚಟವನ್ನು ದೂರ ಮಾಡಬಹುದೇ, ಈ ಒಂದು ಕಾನೂನನ್ನು ಜಾರಿಗೆ ತರುವುದಕ್ಕೆ ಆಗುತ್ತದೆಯೇ ಎನ್ನುವುದು ಒಂದು ದೊಡ್ಡ ಪ್ರಶ್ನೆ. ಈ ಒಂದು ವಾತಾವರಣದಲ್ಲಿ ಈ ಪ್ರೊಹಿಬಿಷನ್ ಆ ಇಂಟ್ರಡ್ಯೂಸ್ ಮಾಡಿದರೆ ಅದನ್ನು ಎಫೆಕ್ಟೀವ್ ಆಗಿ ಜಾರಿಗೆ ತರಲಿಕ್ಕೆ ಆಗುವುದಿಲ್ಲ. ಹಾಗೆ ಜಾರಿಗೆ ತರಬೇಕಾದರೆ ಒಳ್ಳೆಯ ವಾತಾವರಣ ಉಂಟು ಮಾಡಬೇಕು, ಆ ರೀತಿ ಒಳ್ಳೆಯ ವಾತಾವರಣ ಉಂಟು ಮಾಡಬೇಕು ಎಂದು ೧೨ ಅಂಶದ ಕಾರ್ಯವನ್ನು ಕೇಂದ್ರ ಸರ್ಕಾರ ದವರು ಎಲ್ಲಾ ರಾಜ್ಯಸರ್ಕಾರಗಳಿಗೆ ಕೊಟ್ಟಿದ್ದಾರೆ. ಈ ೧೨ ಅಂಶದ ಕಾರ್ಯದಲ್ಲಿ ಉತ್ತಮ ವಾತಾವರಣ ಉಂಟು ಮಾಡಲಿಕ್ಕೆ ಮಾಡಿದ್ದಾರೆ. ಈ ಕುಡಿಯುವ ಚಟ ಎಲ್ಲಾ ಜಾಟಗಳಿಗಿಂತ ಕೆಟ್ಟ ಚಟ ಎಂದು ಗೊತ್ತಿದೆ, ಆದರೆ ನಾನುತು ಕುಡಿಯುವುದಿಲ್ಲ. ಹುಡುಗಿಯವರ ಹುಚ್ಚು ಇದ್ದರೆ ಮದುವೆ ಮಾಡಿ ತೋರಿಸಬಹುದು, ಆದರೆ ಈ ಕುಡಿತದ ಹುಚ್ಚು ಇದ್ದರೆ ಯಾವರೀತಿ ಮಾಡಿ ತೋರಿಸುವು ದಕ್ಕಾಗುವುದಿಲ್ಲ. ಈಗ ಪ್ರಾಹಿಬಿಷನ್ ತರಬಾರದು ಎಂದು ಯಾರು ಹೇಳುವುದಿಲ್ಲ. ನಮ್ಮ ಪಕ್ಷ ಬಡವರ ಹಿತಕ್ಕಾಗಿ ದುಡಿಯಬೇಕು ಎಂದು ಇರತಕ್ಕುದ್ದು. ನಮಗೆ ಜನರ ಬೆಂಬಲ ಸಂಪೂರ್ಣ ಇದೆ, ನಾವು ಇದ್ದೇವೆ ಆ ಮನಾಪಲಿ ಲಿಂಗಪ್ಪನವರಿಗೆ ಕೊಟ್ಟಿಲ್ಲಿ.

ಶ್ರೀ ಕೋಣಂದೂರು ಲಿಂಗಪ್ಪ.—ಜನ ಬೆಂಬಲ ಇಲ್ಲದೇ ಬರುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಸ್. ಎಂ. ಯಾಹ್ಯಾ.—ಇಡೀ ಭೂಲೋಕದ ಬಡವರಿಗೆ ಒಬ್ಬರೇ ನಾಯಕರು, ಎಂದರೆ ಮಾನ್ಯ ಲಿಂಗಪ್ಪನವರು ಎನ್ನುವ ಮನೋಭಾವನೆ ಅವರಿಗೆ ಹುಟ್ಟಿದೆ. ಈಗ ಈ ಪ್ರಾಹಿಬಿಷನ್ ವಿಚಾರದಲ್ಲಿ ಬಹಳಷ್ಟು ಗಂಭೀರ ರೀತಿಯಲ್ಲಿ ಯೋಚನೆ ಮಾಡಬೇಕಾಗಿದೆ. ಕಾನೂನು ಮಾಡುವುದು ಸರ್ಕಾರದ ಕೆಲಸ, ಆದರೆ ಇದು ಪ್ರತಿಯೊಬ್ಬ ವ್ಯಕ್ತಿಯ ಕೆಲಸ ಈ ಕಾರಣದಿಂದ ನಾವೆಲ್ಲರೂ ಯೋಚನೆ ಮಾಡಿ

ವಾತಾವರಣ ಚೆನ್ನಾಗಿ ಇದ್ದರೆ ಕಾನೂನನ್ನು ಯಾವರೀತಿ ಬೇಕಾದರು ತರಬಹುದು. ಕೆಲವರಿಗೆ ಲೈಸೆನ್ಸ್ ಕೊಡಬೇಕು ಎನ್ನುವುದು ಇದ್ದರೆ ಅದೇರೀತಿ ಕೊಡೋಣ. ಈಗ ಲಿಮಿಟೆಡ್ ಪ್ರೊಹಿಬಿಷನ್ ತರುವುದು ಒಳ್ಳೆಯದಲ್ಲ, ಟೋಟಲ್ ಪ್ರೊಹಿಬಿಷನ್ ತರಬೇಕು. ಹಾಗೆ ಒಳ್ಳೆಯ ನೀತಿ ಉಂಟು ಮಾಡಿ ಕೆಲಸ ಮಾಡಿದರೆ ಇದರಿಂದ ದೇಶಕ್ಕೆ ಲಾಭವಾಗುತ್ತದೆ.

SRI S. M. SHEERNALLY CHANDRASHEKAR.—I have advocated for the total prohibition.

ಶ್ರೀ ಎಸ್. ಎಂ. ಯಾಹ್ಯಾ.—ಅದಕ್ಕಾಗಿ ಈ ಕುಡಿಯುವುದರಿಂದ ಏರ್ಪಡ್ಡ ಸಾಮಾಜಿಕವಾಗಿ, ಆರ್ಥಿಕವಾಗಿ, ಹಾನಿಯಾಗುತ್ತದೆ ಎನ್ನುವುದರ ಬಗ್ಗೆ ಅಧ್ಯಯನ ಮಾಡಬೇಕೆಂದು ಶ್ರೀ ವಿ. ಕೆ. ಆರ್. ವಿ. ರಾವ್ ಇನ್ವೆಸ್ಟಿಗೇಷನ್‌ನಲ್ಲಿ ಪ್ರೊಫೆಸರ್ ಒಬ್ಬರು ಹೇಳಿದ್ದಾರೆ. ಡಾ. ತಿಮ್ಮಯ್ಯನವರೂ ಕೂಡ ಅದರ ಬಗ್ಗೆ ಅಳವಾಗಿ ಯೋಚನೆ ಮಾಡಿ ಅವರ ವಿಚಾರಸಿನ ಸಹಿತ ಒಂದು ರಿಪೋರ್ಟನ್ನು ಕೊಟ್ಟಿದ್ದಾರೆ, ಅದನ್ನು ನಾವು ಅಧ್ಯಯನ ಮಾಡುತ್ತಿದ್ದೇವೆ. ಈ ಪ್ರೊಹಿಬಿಷನ್ ವಿಚಾರದಲ್ಲಿ ನಾನು ಎಲ್ಲರನ್ನೂ ಕೇಳಿಕೊಳ್ಳುವುದು ಇಷ್ಟೆ. ಇದು ನ್ಯಾಷನಲ್ ಪಾಲಿಸಿ ಆಗಬೇಕು ಎಂದು. ಇದು ಇಡೀ ದೇಶಕ್ಕೆ ಅನ್ವಯಿಸಬೇಕು, ಇದು ತಾಲ್ಲೂಕಿಗೇ ಆಗಲಿ ಅಥವಾ ಒಂದು ಜಿಲ್ಲೆಗೇ ಆಗಲಿ ಅಥವಾ ಒಂದು ಸ್ಟೇಟ್‌ಗೇ ಆಗಲಿ ಅನ್ವಯಿಸಬಾರದು ಎಂದು ನನ್ನ ಅಭಿಪ್ರಾಯ. ಇದು ನ್ಯಾಷನಲ್ ಪಾಲಿಸಿ ಆಗಬೇಕು. There should be a national policy on prohibition and to that effect the Central Government has given 12 point programme and this is the initial stage in introducing the prohibition. ಈ ಪ್ರೊಹಿಬಿಷನ್ ವಿಚಾರದಲ್ಲಿ ಹೇಳುವುದು ಇದೇನೂ ಲಾಸ್ಟ್ ಸ್ಟೇಜ್ ಅಲ್ಲ, ಇದು ಫಸ್ಟ್ ಸ್ಟೇಜ್. ಈ ಕಾರಣದಿಂದ ಈ ಪ್ರೊಹಿಬಿಷನ್ ಅನ್ನು ಜಾರಿಗೆ ತರಬೇಕಾಗಿದ್ದರೆ ಇದು ಒಂದು ನ್ಯಾಷನಲ್ ಪಾಲಿಸಿ ಆಗಬೇಕು ಎಂದು ಹೇಳುತ್ತೇನೆ. ಅದಕ್ಕಾಗಿ 12 ಅಂಶದ ಕಾರ್ಯಕ್ರಮವನ್ನೂ ಕೂಡ ಕೊಟ್ಟಿದ್ದಾರೆ. ಅದರಲ್ಲಿ ಎಷ್ಟೋ ಜನರು ಹೇಳುತ್ತಾರೆ ಈ 12 ಅಂಶದ ಕಾರ್ಯಕ್ರಮ ಏನು ಇದೆ ಅದನ್ನು ಜಾರಿಗೆ ತರುವುದು ಅಷ್ಟು ಸುಲಭವಲ್ಲ ಎಂದು. ಅದರೆ ನಮ್ಮ ಕರ್ನಾಟಕದಲ್ಲಿ ಇದನ್ನು ಅದಷ್ಟು ಮಟ್ಟಿಗೆ ಜಾರಿಗೆ ತರುವುದಕ್ಕೆ ಪ್ರಯತ್ನಪಡುತ್ತಿದ್ದೇವೆ. ಇದರ ಬಗ್ಗೆ ನಾವು ಒಂದು ಸರ್ಕುಲರ್ ಅನ್ನು ಹೊರಡಿಸಿದ್ದೇವೆ, ಅದು ಯಾವುದೆಂದರೆ ಆಫೀಸರುಗಳು ಆಫೀಸಿನ ವೇಳೆಯಲ್ಲಿ ಕುಡಿದುಕೊಂಡು ಬರಬಾರದು ಎಂದು ಹಾಗೆಯೇ ಡ್ರೈವರ್ಸ್ ಕೂಡ ಕುಡಿದುಕೊಂಡು ಬರಬಾರದು ಮತ್ತು ಪೋಲೀಸರಿಗೂ ಹೇಳಿದ್ದೇವೆ.

ಇನ್ನು ಈ ಅಂಗಡಿಗಳ ಬಗ್ಗೆ ಹೇಳಬೇಕಾದರೆ ಈ ಅಂಗಡಿಗಳು ಎಲ್ಲಿ ಇರಬೇಕು, ಎಲ್ಲಿ ಇರಬಾರದು ಅಂತ ಹೇಳಿದ್ದೇವೆ. ದೇವಸ್ಥಾನಗಳ ಮುಂದೆ, ಶಾಲಾಕಾಲೇಜುಗಳ ಮುಂದೆ ಮತ್ತು ಹೆಚ್ಚೇಇರುವಂಥಾ ಕಡೆಗಳಲ್ಲಿ ಇರಬಾರದು ಎಂದು ಹೇಳಿದ್ದೇವೆ. ಕೆಲವುಕಡೆಗಳಲ್ಲಿ ಅಂಥಾ ಕಡೆಇದ್ದುದನ್ನು ತೆಗೆದು ಹಾಕಿದ್ದೇವೆ. ಆದರೆ ಬೆಂಗಳೂರು ಅಂತಹ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಈಗಾಗಲೇ ಬಹಳಷ್ಟು ಇದರ ಬಗ್ಗೆ ಜಾರಿಗೆ ತಂದಿದ್ದಾರೆ ಆಕ್ಷನ್‌ನಲ್ಲೂ ಕೂಡ ಇಂಥಾ ಕಡೆ ಇರುವ ಅಂಗಡಿಗಳನ್ನು ಬೇಕಾದಷ್ಟು ತೆಗೆದು ಹಾಕಿದಾರೆ, ಇನ್ನು ಕೆಲವು ಕಡೆ ತೆಗೆಯುತ್ತಿದ್ದಾರೆ. ಈ ರೀತಿ ಅಂಗಡಿಗಳನ್ನು ತೆಗೆಯುವಾಗ ಅದರಲ್ಲೂ ಸಹ ಸ್ವಲ್ಪ ಗಲಾಟೆ ಬರುತ್ತದೆ ಕೆಲವು ಸಲ ಒಳ್ಳೆಯದಾಗುತ್ತದೆ. ಇನ್ನು ಕೆಲವು ಸಲ ಇದನ್ನು ಒಪ್ಪಿಕೊಳ್ಳುವುದು ಕಷ್ಟ. ಕೆಲವು ಸಲ ಇಲ್ಲಿ ಸಿಟ್ ಲಿಕ್ಕರ್ ವ್ಯಾಪಾರಸ್ಥರು ಬಂದು ಆ ಅಂಗಡಿಗಳನ್ನು ಇಲ್ಲಿ ಇಡಬೇಡಿ ಬೇರೆ ಕಡೆ ಹಾಕಿ ಎಂದು ಒತ್ತಾಯ ಮಾಡುತ್ತಾರೆ. ಆ ಸಂದರ್ಭದಲ್ಲಿ ಅವರು ಹೇಳಿದಂತೆ ಒಪ್ಪಿಕೊಳ್ಳುವುದಕ್ಕೆ ಕಷ್ಟ ಬರುತ್ತದೆ. ಆದುದರಿಂದ ಈ ವಿಷಯದಲ್ಲಿ ಗಂಭೀರವಾಗಿ ಯೋಚನೆ ಮಾಡಬೇಕಾಗಿದೆ. ಈ ಇಲ್ಲಿಸಿಟ ಲಿಕ್ಕರ್ ವಿಚಾರದಲ್ಲಿ ಈ ರೀತಿಯಾದ ತೊಂದರೆ ಬರುತ್ತದೆ.

ಇನ್ನು ಇದರ ಆದಾಯದ ಬಗ್ಗೆ ಹೇಳಿದ್ದಾರೆ. ಆ ವಿಚಾರದಲ್ಲಿ ನನ್ನ ಹೆಸರನ್ನು ತೆಗೆದು ಕೊಂಡು ಹೇಳಿದ್ದಾರೆ. ಇದರ ವರಮಾನದ ಬಗ್ಗೆ ಹೇಳುವುದಕ್ಕೆ ನಾನು ಈಗ ಹೋಗುವುದಿಲ್ಲ. ಒಟ್ಟಿನಲ್ಲಿ ನಾನು ಇದರ ಬಗ್ಗೆ ಹೇಳಬೇಕಾದರೆ ಇದರಿಂದ ಬರುವ ಆದಾಯ ಹೋಗುತ್ತದೆನ್ನುವ ವಿಚಾರದಲ್ಲಿ ಹೇಳಬೇಕಾದರೆ ಇದಕ್ಕೆ ಲಾಸ್ಟ್ ಪ್ರಿಯಾರಿಟಿ ನನ್ನದು ಇದೆ ಎಂದು ಹೇಳುತ್ತೇನೆ. ನಿಮಗೆ ಒಂದು ಸಣ್ಣ ಉದಾಹರಣೆ ಹೇಳುವುದಾದರೆ ಈ ಪ್ರೊಹಿಬಿಷನ್ ತಕ್ಷಣ ಜಾರಿಗೆ

ತಂದರೆ ಸೌತ್ ಕೆನರಾ ಒಂದು ಜಿಲ್ಲೆಯಲ್ಲೇ 10 ಸಾವಿರ ಜನ ಟ್ಯಾಪರ್ಸ್‌ಗೆ ಕೆಲಸ ಹೋಗುವು ದಲ್ಲದೆ ಇನ್ನೂ ಬೇಕಾದಷ್ಟು ಜನಕ್ಕೆ ಕೆಲಸ ಹೋಗುತ್ತದೆ. ಇದರಲ್ಲಿ ಒಂದು ತೊಂದರೆ ಇದೆ ಎಂದರೆ ಇದರಿಂದ ಸಾವಿರಾರು ಜನಕ್ಕೆ, ಲಕ್ಷಾಂತರ ಜನ ಅನ್ ಎಂಪ್ಲಾಯ್ ಆದರೆ ಅವರಿಗೆ ತಕ್ಷಣ ಕೆಲಸ ಕೊಡಲಕ್ಕೆ ಬರುವುದಿಲ್ಲ. ಆದುದರಿಂದ ನಾನು ಹೇಳುವುದು ಟೋಟಲ್ ಪ್ರೊಹಿಬಿಷನ್ ಬಂದಾಗ ಈ ಎಲ್ಲಾ ವಿಚಾರವನ್ನೂ ಯೋಚನೆ ಮಾಡಿ ಕೊನೆಗೆ ಸರ್ಕಾರಕ್ಕೆ ಬರುವಂಥಾ ಆದಾಯ ವನ್ನು ಬಿಡುವುದಕ್ಕಾಗುವುದಿಲ್ಲ ಎಂದು ಬಂದಾಗ ಅವಾಗ ಅದಕ್ಕೆ ಬೇರೆ ಒಂದು ಆಲ್ಟರ್‌ನೇಟಿವ್ ಆಗಿ ಬರತಕ್ಕಂಥಾ ಆದಾಯ ಬಂದರೆ ಆವಾಗ ಇದನ್ನು ಬಿಡಬೇಕಾಗುತ್ತದೆ. ಆದುದರಿಂದ ಈ ಎಲ್ಲಾ ವಿಚಾರವನ್ನೂ ಒಂದು ಕಾಂಪ್ರಹೆನ್ಸೀವ್ ಆಗಿ ಸ್ಟಡಿ ಮಾಡಿ ಟೋಟಲ್ ಪ್ರೊಹಿಬಿಷನ್ ಜಾರಿಗೆ ತರಬೇಕು. ಈ ಒಂದು ಸ್ಟೇಟ್‌ನಲ್ಲಿ ಪ್ರೊಹಿಬಿಷನ್ ಅನ್ನು ಜಾರಿಗೆ ತರಬೇಕು ಅನ್ನುವ ವಿಚಾರ ಆಲ್ಲ. ಟೋಟಲ್ ಆಗಿ ಇದನ್ನು ತರಬೇಕಾದರೆ ಅದನ್ನು ಯಾವಾಗ ತರಬೇಕು, ಯಾವ ರೀತಿಯಲ್ಲಿ ತರಬೇಕು ಅನ್ನುವುದನ್ನು ಯೋಚನೆ ಮಾಡಿ ಮಾಡಬೇಕು. ಈ ಕಾರಣದಿಂದ ಮಾನ್ಯ ಪ್ರಭಾಕರರವರು ತಂಬಾಕಕ್ಕಂಥಾ ಕೆಲವು ವಿಚಾರಗಳನ್ನು ನಂಪೂರ್ಣವಾಗಿ ಒಪ್ಪಿದರೂ ಕೂಡ ಈ ಒಂದು ರೆಸಲ್ಯೂಷನ್ ಅನ್ನು ಅವರು ವಾಪಸನ್ನು ತೆಗೆದುಕೊಳ್ಳಬೇಕು ಎಂದು ಅವರಲ್ಲಿ ಏನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಪ್ರಭಾಕರ್.—ಇದನ್ನು ಕೂಲಂಕೂಷವಾಗಿ ಪರಿಶೀಲನೆ ಮಾಡುತ್ತೇವೆ. ಎಂದು ಹೇಳಿದ್ದಾರೆ. ಅವರು ಇದನ್ನು ಎಷ್ಟು ದಿವಸದಲ್ಲಿ ಜಾರಿ ಮಾಡುತ್ತೇವೆ ಅಂತ ಒಂದು ಆಶ್ವಾಸನೆ ಕೊಟ್ಟರೆ ನಾನು ಇದರ ಬಗ್ಗೆ ಏನು ಮಾಡಬೇಕು ಅನ್ನುವುದನ್ನು ಹೇಳುವುದಕ್ಕೆ ತಯಾರಾಗಿದ್ದೇನೆ.

SRI S. M. YAHYA.—My view is very clear. There should be a national policy but not the State policy. Therefore it is not for us alone to decide in the matter, it is for the national leaders also to decide this matter.

ಶ್ರೀ ಕೆ. ಪ್ರಭಾಕರ್.—ಇದನ್ನು ಈಗ ಸಂಪೂರ್ಣವಾಗಿ ತರಲಾಗದಿದ್ದರೂ ಸತ್‌ಸಂಪ್ರ ದಾಯವಾಗಿ ಇದು ಬರುವಂತೆ ಪ್ರಯತ್ನಮಾಡಿ ಇದನ್ನು ಜಯುಪ್ರದವನ್ನಾಗಿ ಮಾಡುತ್ತೇವೆ ಎಂದು ಮಾನ್ಯ ಮಂತ್ರಿಗಳು ಆಶ್ವಾಸನೆ ಕೊಟ್ಟಿರುವುದರಿಂದ ಈ ನಿರ್ಣಯವನ್ನು ನಾನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

MR. DEPUTY SPEAKER.—I thinks the House agrees for the withdrawal of the resolution.

Hon'ble Members : Yes

The resuolution was by eave withdrawn

MR. DEPUTY SPEAKER —Next resolution Sri B.M. Horakeri, may be moved.

ಶ್ರೀ ಬಿ. ಎಂ. ಹೊರಕೇರಿ.—ಈ ಖಾನಗಿ ನಿರ್ಣಯ ಏನು ಇದೆ ಇದರ ವಿಷಯವಾಗಿ 14ನೇ ಏಪ್ರಿಲ್‌ನಲ್ಲಿ ಈ ಸದನದಲ್ಲಿ ಕೂಲಂಕೂಷವಾಗಿ ಚರ್ಚಿಸಿದ್ದುದರಿಂದ ಈ ಪ್ರಸ್ತುತ ಸನ್ನಿವೇಶ ದಲ್ಲಿ ಈ ನಿರ್ಣಯವನ್ನು ಮುಂದಿನಲು ನಾನು ಇಚ್ಚಿಸುವುದಿಲ್ಲ ಎಂದು ಹೇಳಿಬಯಸುತ್ತೇನೆ.

MR. DEPUTY SPEAKER.—The House will now stand adjourned and meet at 1-00 P.M on Monday.

The House adjourned at Twelve Minutes past Twelve of the Clock to meet again at One of the Clock on Monday, the 17th May 1976.

WD 4758—GPB—550—23-7-1976

ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

Monday, the 17th May, 1976/Vaishakha 27, 1898 S.E.

The House met in the Assembly Chamber, Vidhana Soudha, at One of the Clock.

[MADAM SPEAKER (SMT. K. S. NAGARATHNAMMA) in the Chair]

STARRED QUESTIONS
(to which Oral Answers were given)

MADAM SPEAKER.—The Minister for Industries and Parliamentary Affairs and the Minister for cooperation are not in station. I hold our Question numbers 694, 764 and 799, standing in their names.

Counting of service of private school teachers.

662. SRI V. M. GUADI (Holiyal).— Will the Minister or Education be pleased to state.—

(*a*) whether service rendered by private school teachers and District School Board teachers who were subsequently absorbed in Government service have been ordered to be counted for purposes of pension, gratuity, and fixation of pay, etc;

(*b*) if not the reasons;

(*c*) whether Government on humanitarian grounds intends to extend the said facility to these teachers ?

SRI M. MALLIKARJUNASWAMY (Minister for Education).—

(*a*) In respect of employees of District School Boards who were absorbed into Government service, their entire service has been counted for purposes of pension, gratuity, fixation of pay.

In the case of employees of private primary schools who were selected and appointed afresh by the District School Boards due to closure of private primary schools and later absorbed into Government service, only 1/4th of the aided private school service, subject to a

maximum of 3 years, counts for purposes of pension or gratuity as per rule 248 of Karnataka Civil Services Rules, in addition to their service under District School Boards.

(*b*) and (*c*) Does not arise in view of reply to clause (*a*) above.

ಶ್ರೀ ವಿ. ಎಂ ಘಾಡಿ —ನನ್ನ ಪ್ರಶ್ನೆ ಎಡೆಡ್ ಸ್ಕೂಲುಗಳನ್ನು ಡಿಸ್ಟ್ರಿಕ್ಟ್ ಸ್ಕೂಲ್ ಬೋರ್ಡಿನವರು ಮೂರು ಕಂಡೀಷನ್ಸ್ ಮೇಲೆ ಅಬ್ಸಾರ್ಬ್ ಮಾಡಿದರು ಒಂದು ಹಲ್ತ್, ಕ್ವಾಲಿಫಿಕೇಷನ್ ಮತ್ತು ವಿಲ್ಲಿಂಗ್‌ನೆಸ್ ಈ ಕಂಡೀಷನ್ಸ್ ಮೇಲೆ, ಈ ಟೀಚರ್ಸ್‌ಗಳಿಗೆ ಮಾನವೀಯತೆ ದೃಷ್ಟಿಯಿಂದ ಅನುಕೂಲತೆ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

† ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಇಲ್ಲಿ ಅನುಕೂಲತೆ ಪ್ರಶ್ನೆ ಇಲ್ಲ, ಕಾರಣ ಹಿಂದೆ ಬಾಂಬೆ ಗೌರ್ನಮೆಂಟ್ ಇದ್ದಾಗ ಪ್ರೈವೇಟ್ ಸ್ಕೂಲ್ಸ್ ಏನು ನಡೆಸುತ್ತಿದ್ದರು ಅವನ್ನೂ ಹಣಕಾಸಿನ ತೊಂದರೆಯಿಂದ ಕ್ಲೋಸ್‌ಡೌನ್ ಮಾಡಿದಂತ ಸಂದರ್ಭದಲ್ಲಿ ಆ ಶಾಲೆಗಳನ್ನು ಡಿಸ್ಟ್ರಿಕ್ಟ್ ಸ್ಕೂಲ್ ಬೋರ್ಡಿನವರು ಪ್ರಾರಂಭ ಮಾಡಿದರು, ಆಗ ಇದ್ದಂತ ಸ್ಟಾಫ್ ಅಂದರೆ ಟೀಚರ್ಸ್‌ನ್ನು ಡೈರೆಕ್ಟ್ ಆಗಿ ಅಪಾಯಿಂಟ್ ಮಾಡಿಲ್ಲ. ಯಾರು ಎಲಿಜಬಲ್ ಆಗಿದ್ದರೂ, ಯಾರಿಗೆ ಕ್ವಾಲಿಫಿಕೇಷನ್ ಇತ್ತು ಅಂಥವರನ್ನು ಸ್ಕ್ರೀನಿಂಗ್ ಕಮಿಟಿಯವರಂ ಸ್ಕ್ರೀನ್ ಮಾಡಿ ಅಪಾಯಿಂಟ್‌ಮೆಂಟ್ ಮಾಡಿದ್ದಾರೆ, ಮತ್ತೆ ೧೨-೨-೧೯೫೫ ರಲ್ಲಿ ಬಾಂಬೆ ಗೌರ್ನಮೆಂಟ್ ರೆಸ್ಕೂಲ್ಯೂಷನ್ ಪಿ. ಟಿ. ಪಿ. ೧೯೫೪ ರ ಪ್ರಕಾರ ಹೊಸದಾಗಿ ಸೇರಿದಂತವರನ್ನು ನ್ಯೂ ಎಂಟ್ರೆಂಟ್ಸ್ ಎಂದು ಟೀಟ್ ಮಾಡಿ ಅವರಿಗೆ ಮಿನಿಮಮ್ ಪೇಸ್ಕೇಲನ್ನು ಗೊತ್ತು ಮಾಡಿ ಅಪಾಯಿಂಟ್‌ಮೆಂಟ್ ಮಾಡಿದ್ದಾರೆ.

ಶ್ರೀ ವಿ. ಎಂ. ಘಾಡಿ.— ಆವರು ಮೊದಲಿಂದಲೂ ಸೇವೆ ಸಲ್ಲಿಸಿದ್ದಕ್ಕಾಗಿ ಕನಿಷ್ಟಪಕ್ಷ ಎರಡು ಮೂರು ವೆಯಿಟೇಜ್ ಕೊಡುವುದಕ್ಕಾಗುತ್ತದೆಯೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಮಾನವೀಯ ದೃಷ್ಟಿ ಇರುವುದರಿಂದಲೇ ೧೮-೩-೧೯೭೦ ರಲ್ಲಿ ಆರ್ಡರ್ ಹೊರಡಿಸಿ ಮೂರು ವರ್ಷಗಳಿಗಿಂತ ಕಡಿಮೆ ಇಲ್ಲದ ಸೇವೆ ಸಲ್ಲಿಸಿದ್ದರೆ ಅಂಥವರಿಗೆ ಪೆನ್‌ಷನ್ ಗ್ರಾಚ್ಯುಟಿಯನ್ನು ಕರ್ನಾಟಕ ರಾಜ್ಯದ ಸಿವಿಲ್ ಸೇವಾ ನಿಯಮಗಳ ಪ್ರಕಾರ ಮಾಡಿದ್ದೇವೆ.

ಶ್ರೀ ವಿ. ಎಂ. ಘಾಡಿ.—ಅವರ ಸಹಾಯಕ್ಕಾಗಿ ಎರಡು ವೆಯಿಟೇಜ್ ಆದರೂ ಕೊಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಇಲ್ಲಿ ವೆಯಿಟೇಜ್ ಕೊಡುವ ಪ್ರಶ್ನೆ ಉದ್ಭವಿಸುವುದಿಲ್ಲ.

SRI B. B. SAYANAK.—Has it come to the notice of the Government that some teachers in the Aided Private Schools though they have retired 7 years back, they are not getting their pension and gratuity ?

SRI M. MALLIKARJUNASWAMY.— Let the Member put a seperate question, I will answer it.

Sale of maida bags by consumer society, Haliyal

663. SRI V.M. GHADI (Haliyal).—Will the Minister for Food and Civil Supplies be pleased to state.—

(*a*) whether the Tahsildar of Haliyal has issued some bogus permits in connection with maida in the year 1973 ;

(*b*) whether the maida bags were cought when the consumers society, Haliyal, was selling to one merchant of Haliyal :

---

† Indicates that remarks or speeches have not been revised by the member concerned.

(*c*) whether the case has been filed against the merchant:

(*d*) whether it is not a fact that the Deputy Commissioner, Karwar, has issued foodgrain licence to the same merchant :

(*e*) whether this case has been reported to the Government ;

(*f*) if not, whether the Government has withdrawn this case ;

(*g*) if so, the reasons ?

Smt. E E. VAZ.(Minister for Food and Civil Supplies)—

(*a*) No.

(*b*) No.

(*c*) Yes.

(*d*) It is a fact.

(*e*) The Deputy Commissioner is empowered to issue licence in his District. There is no need to report this to Government.

(*f*) and (*g*) The case as referred to at clause (*c*) has been withdrawn as the policy of takeover of wholesale trade in wheat and wheat products was given up and various orders issued thereunder were repealed.

ಶ್ರೀ ವಿ.ಎಂ. ಫಾಡಿ.—ಪ್ರಶ್ನೆ ಎ.ಬಿ. ಮತ್ತು ಸಿ ಗಳಿಗೆ ಇಲ್ಲವೆಂದು ಉತ್ತರವನ್ನು ಕೊಟ್ಟಿರುತ್ತೀರಿ ಆಫೀಸರ್‌ಸರಿಯಾದ ಇನ್‌ಫರ್ಮೇಷನ್ ಕೊಟ್ಟಿಲ್ಲವೆಂದು ಕಾಣುತ್ತದೆ. ರಿಜಿಸ್ಟರ್ ತರಿಸಿ ನೋಡಿದರೆ ತಹಸೀಲ್‌ದಾರರು ಬೋಗಸ್ ಪರ್ಮಿಟ್‌ಗಳನ್ನು ಇಶ್ಯೂ ಮಾಡಿರುವುದು ಕಂಡುಬರುತ್ತದೆ. ಮೈದಾ ಹಿಟ್ಟಿನ ಚೀಲಗಳನ್ನು ಕೊಟ್ಟಿರುವ ಬಗ್ಗೆ ಪಂಚನಾಮೆಯನ್ನು ಕೂಡ ಮಾಡಿದ್ದಾರೆ. ಇದಕ್ಕೆ ಇಲ್ಲವೆಂದು ಹೇಳುತ್ತಿರುವುದನ್ನು ನೋಡಿದರೆ ಸರಿಯಾದ ಇನ್‌ಫರ್ಮೇಷನ್ ಕೊಟ್ಟಿಲ್ಲವೆಂದು ಕಾಣಿಸುತ್ತದೆ.

† ಶ್ರೀ ಮತಿ ಇ.ಇ ವಾಜ್.—ತಾವು ಹೇಳಿದ್ದೀರಿಬೋಗಸ್ ಪರ್ಮಿಟ್ ಇಶ್ಯೂ ಮಾಡಿದ್ದಾರೆಂದು ತಹಸೀಲ್‌ದಾರರ ಸಬ್ ಇನ್‌ಸ್ಪೆಕ್ಟರವರಿಗೆ ಕೇಸ್ ಬುಕ್ ಮಾಡಿ ಎಂದು ದೂರು ಕೊಟ್ಟಿರುವುದರಿಂದ ಬೋಗಸ್ ಸರ್ಟಿಫಿಕೇಟ್ ಇಶ್ಯೂಮಾಡಲು ಅವಕಾಶವಿರುವುದಿಲ್ಲ. ಆದುದರಿಂದ ತಹಸೀಲ್‌ದಾರರು ಬೋಗಸ್ ಪರ್ಮಿಟ್ ಕೊಟ್ಟಿಲ್ಲ ಚಿನಿಯನ್ ಪರ್ಸನ್ಸ್‌ಗೆ ಮಾತ್ರ ಪರ್ಮಿಟ್ ಕೊಟ್ಟಿರುತ್ತಾರೆಂದು ಸ್ಪಷ್ಟವಾಗಿ ತಿಳಿದುಬರುತ್ತೆ.

ಶ್ರೀ ವಿ.ಎಂ. ಫಾಡಿ.—ಮೊದಲಿದ್ದ ತಹಸೀಲ್‌ದಾರರು ಬೋಗಸ್ ಪರ್ಮಿಟ್‌ನ್ನು ಇಷ್ಯೂ ಮಾಡಿರುತ್ತಾರೆ. ಆಮೇಲೆ ಈಗ ಬಂದಿರುವವರು ಹೊಸಬರಿರುತ್ತಾರೆ. ಬೋಗಸ್ ಪರ್ಮಿಟ್ ಇಷ್ಯೂ ಮಾಡಿರುವುದಕ್ಕೆ ಸರಿಯಾದ ಮಾಹಿತಿಯನ್ನು ಒದಗಿಸಿಕೊಟ್ಟಿಲ್ಲವೆಂದು ಹೇಳುತ್ತೇನೆ.

ಶ್ರೀ ಮತಿ ಇ.ಇ. ವಾಜ್.—ನಮಗೆ ಬಂದಿರುವ ವರದಿಪ್ರಕಾರ ಸರಿಯಾದ ಮಾಹಿತಿಯನ್ನು ಒದಗಿಸಿದ್ದಾರೆ. ಮೂರು ಜನರ ಹೆಸರಿನಲ್ಲೂ ಪರ್ಮಿಟ್‌ನ್ನು ಕೊಟ್ಟಿರುತ್ತಾರೆ. ಸೋಸೈಟಿಯವರು ಅದಲು ಬದಲು ಮಾಡಿಕೊಂಡು ಬೇರೆ ಪಾರ್ಟಿಗೆ ಕೊಟ್ಟಿದ್ದಾರೆ. ಆದು ಗಮನಕ್ಕೆ ಬಂದ ಮೇಲೆನೇ ಪೋಲೀಸ್ ಅಧಿಕಾರಿಗಳಿಗೆ ದೂರು ಕೊಟ್ಟಿರುವುದು. ದೂರು ಕೊಟ್ಟಮೇಲೆ ಕೇಸ್ ಬುಕ್ ಮಾಡಿದ್ದಾರೆ. ೬ ಚೀಲ ರವೆ ೨೦/೨ ಚೀಲ ಅಟ್ಟ, ಒಂದು ಚೀಲ ಮೈದ these are the items on which a case in No. 79/73 under Section 7 of the Essential Commodities Act has been filed in the Court of Judicial Munsiff Court, Haliyal in February 1974 .

ಶ್ರೀ ಸಿ. ಬೈರೇಗೌಡ.— ತಾವು 'ಎಫ್' ಗೆ ಉತ್ತರ ಕೊಡುತ್ತಾ, " The case as referred to at clause (c) has been withdrawn as the policy of take over of wholesale trade in wheat and wheat products was given up and various orders issued thereunder were repealed " May I know ಎಂದು ಹೇಳಿದ್ದೀರಿ. Whether there was any restriction to sell this Maida ?

ಶ್ರೀ ಮಂತಿ ಇ.ಇ. ವಾಜ್.—ಕೇಸ್ ಬುಕ್ ಆದಾಗ, ಆರ್ಡರ್ ಆಗಿರಲಿಲ್ಲ. ಆದುದರಿಂದ ಕೇಸ್ ಫೈಲ್ ಮಾಡುವುದಕ್ಕೆ ಕಾರಣವಾಯಿತು. ಏಪ್ರಿಲ್ ೧೯೭೪ರಲ್ಲಿ ಆದಕ್ಕೆ ಸಂಬಂಧಪಟ್ಟ ಎಲ್ಲ ಕೇಸನ್ನು ವಿತ್ ಡ್ರಾ ಮಾಡಿಕೊಳ್ಳಬೇಕೆಂದು ಸರ್ಕಾರ ತೀರ್ಮಾನ ತೆಗೆದುಕೊಂಡಮೇಲೆ ಕೇಸನ್ನು ವಿತ್ ಡ್ರಾ ಮಾಡಿ ಕೊಳ್ಳಲಾಯಿತು.

ಶ್ರೀ ವಿ.ಎಂ. ಫಾಡಿ. ೧೯೭೩ರಲ್ಲಿಯೇ ಕೇಸ್ ಬುಕ್ ಆಗಿ ಬೋಗಸ್ ಪರ್ಮಿಟ್‌ಗಳನ್ನು ಇಷ್ಯು ಮಾಡಿದ್ದಾರೆಂದು ಹೇಳಿದ ಮೇಲೆ ಇದನ್ನು ವಿಚಾರಮಾಡಿ ಪ್ರಾಸಿಕ್ಯೂಟ್ ಮಾಡಲು ಪ್ರಯತ್ನ ಮಾಡಂತ್ತಿರಾ?

ಶ್ರೀ ಮಂತಿ ಇ.ಇ. ವಾಜ್.—೧೯೭೩-೭೪ರವರೆಗೆ ಅನೇಕ ಕೇಸ್‌ಗಳು ಆರ್ಡರ್ ಪ್ರಕಾರ ಬುಕ್ ಆಗಿದು ೧೯೭೪ರಲ್ಲಿ ರೀಫಿಲ್ ಮಾಡಿದ ಮೇಲೆ ಆದಕ್ಕೆ ಸಂಬಂಧಪಟ್ಟ ಯಾವ ಯಾವ ಕೋರ್ಟಿನಲ್ಲಿ ಯಾವ ಯಾವ ಕೇಸ್‌ಗಳು ಇವೆ ಅವುಗಳನ್ನೆಲ್ಲ, ಹೋಮ್ ಡಿಪಾರ್ಟ್‌ಮೆಂಟ್ ಮತ್ತು ಲಾ ಡಿಪಾರ್ಟ್‌ಮೆಂಟ್ ನಲ್ಲಿ ಕನ್‌ಸಲ್ಟ್ ಮಾಡಿ, ಎಲ್ಲ ಕೇಸ್‌ಗಳನ್ನು ವಿತ್ ಡ್ರಾ ಮಾಡಿದ್ದೇವೆ.

ಶ್ರೀ ವಿ.ಎಂ. ಫಾಡಿ.—'ಡಿ' ಪ್ರಶ್ನೆಗೆ ಉತ್ತರ ಕೊಡುವಾಗ ಸ್ವಲ್ಪ ತಪ್ಪು ಕಂಡುಬಂದಿದೆ. ಇಲ್ಲಿ ಲೈಸೆನ್ಸ್ ಕೊಡುವ ಸಲುವಾಗಿ ತಪ್ಪುಮಾಡಿಲ್ಲ. ಬೋಗಸ್ ಪರ್ಮಿಟ್ ಇಷ್ಯೂ ಮಾಡಿದ್ದು, ಅದನ್ನು ಹಿಡಿದು ಕೇಸ್ ರಿಜಿಸ್ಟರ್ ಮಾಡಿದ್ದಾರೆ. ಸರಕಾರ ಅವರ ಮೇಲೆ ಏನು ಕಾರ್ಯಕ್ರಮವನ್ನು ತೆಗೆದು ಕೊಂಡಿದೆ ಎಂದು ಕೇಳುತ್ತಿದ್ದೇನೆ.

ಶ್ರೀ ಮಂತಿ ಇ.ಇ. ವಾಜ್.—ಎಲ್ಲ ವರದಿಯನ್ನು ತರಿಸಿ, ಅದನ್ನು ಪೂರ್ತಿಯಾಗಿ ಅಧ್ಯಯನ ಮಾಡಿ ಲಾ ಡಿಪಾರ್ಟ್‌ಮೆಂಟ್, ಮತ್ತು ಹೋಮ್ ಡಿಪಾರ್ಟ್‌ಮೆಂಟ್ ರೆಫರ್‌ಮಾಡಿ, ಪರಿಶೀಲನೆ ಮಾಡಿ ಅನಂತರ ಕೇಸನ್ನು ವಿತ್ ಡ್ರಾ ಮಾಡಿಕೊಳ್ಳಲಾಗಿದೆ.

738. **Reservation of posts to SC/ST in promotional vacancies**

(1) M.H. Jayaprakash Narayan (Sirsi)
(2) S.H. Puttarangana'h (Belur)
(3) K. Prabhakar (Varthur)
(4) M.B. Ramaswamy (Anekal)
(5) J.P. Sarvesh (Sedam)
(6) D. Narayanadas (Harapanahalli)
(7) K. Yenkatappa (Shikaripura)
(8) A.M. Suryanarayana Gowda (Yelahanka)
(9) G.K. Subbaiah (Virajpet)
(10) Mahendra Kumar Kallappa (Hulsoor)
(11) Shivanna Bheemappa (Kalmala)

Will the Chief Minister be pleased to state :—

(*a*) whether Government in accordance with the judgment of the Supreme Court in the case General Manager, Southern Railways-*vs*-Rangachari have taken action to provide reservation of posts in promotional vacancies for SCs. and STs. in all cardres in the Government.

(*b*) if not, the reasons ?

SRI D. DEVARAJ URS (Chief Minister).

(*a*) The Supreme Court in the General Manager, Southern Railways-*vs*.Rangachari has upheld reservations in favour of backward classes of citizens in posts filled by promotion by selection.

(*b*) This matter is under the consideration of Government.

ಶ್ರೀ ಎಂ. ಎಚ್ ಜಯಪ್ರಕಾಶ್ ನಾರಾಯಣ್ — ಸ್ವಾಮಿ ತಾವು ಮುಖ್ಯಮಂತ್ರಿಗಳಾದಮೇಲೆ ೨-೩ ಸಾರಿ ಪ್ರಶ್ನೆ ಕೇಳಿದಾಗ ಅದನ್ನು ಜಾರಿಗೆ ತರಲು ಪ್ರಯತ್ನ ಮಾಡುತ್ತೇನೆಂದು ಆಶ್ವಾಸನೆ ಕೊಟ್ಟಿದ್ದೀರಿ. ಇದು ಬಹಳ ತಡವಾಗಿರುತ್ತದೆ. ಜಾಗ್ರತೆ ಮಾಡುತ್ತೀರಾ ಸ್ವಾಮಿ ?

† ಶ್ರೀ ಡಿ. ದೇವರಾಜ ಅರಸ್.—ಈಗಲೂ ಕೂಡ ಅದೇ ಹೇಳುತ್ತಾ ಇದ್ದೇನೆ. ಇದು ಸ್ವಲ್ಪ ಕಠಿಣವಾದ ಸಮಸ್ಯೆಯಾಗಿರುತ್ತದೆ. ಆದುದರಿಂದ ಇದು ತಡವಾಗುವುದಕ್ಕೆ ಕಾರಣವಾಗಿದೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಇದು ಕಠಿಣವಾದ ಪ್ರಶ್ನೆಯಾದರೂ ತಾವು ಇದನ್ನು ಬಿಡಿಸಲು ಶಕ್ತಿಯುತರಾಗಿದ್ದೀರಿ. ಬೇರೆಬೇರೆ ಕಡೆಗಳಲ್ಲಿ ಆಂದರೆ ಪ್ರೈವಿನಿಸ್ಟರು ಸೆಕ್ರೆಟರಿಯೇಟ್‌ನಲ್ಲೂ ಕೂಡ ಇದನ್ನು ಜಾರಿಗೆ ತಂದಿದ್ದಾರೆ. ಪ್ರೈಮಿನಿಸ್ಟರ್ ಮಾಡಿರತಕ್ಕಂಥದ್ದನ್ನು ತಮ್ಮ ಕಾಲದಲ್ಲಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

SRI D. DEVARAJ URS.—I will do my best.

ಶ್ರೀ ಜೆ. ಎಲ್, ಕಬಾಡಿ. —ಬುದಿರುವ ತೊಡಕಾದರೂ ಏನು ಎಂಬುದನ್ನು ಹೇಳುತ್ತೀರಾ?

ಶ್ರೀ ಡಿ. ದೇವರಾಜ್ ಅರಸ್.—ತೊಡಕೇನು ಎನ್ನುವುದನ್ನು ಹೇಳಬೇಕಾದ್ದು ಇಲ್ಲ. I will try my best.

ಶ್ರೀ ಎಂ. ಬಿ. ರಾಮಸ್ವಾಮಿ.—ರಂಗಾಚಾರಿ ಕೇಸ್‌ನಲ್ಲಿ ಸ್ಪಷ್ಟವಾಗಿ ಹೈಕೋರ್ಟ್ ಜಡ್ಜ್‌ಮೆಂಟ್‌ನಲ್ಲಿ ಇದನ್ನು ಜಾರಿಗೆ ಕೊಟ್ಟಿರುತ್ತಾರೆ. ಹರಿಜನರು ತಮ್ಮಲ್ಲಿ ವಿಶೇಷವಾದ ವಿಶ್ವಾಸವನ್ನು ಇಟ್ಟುಕೊಂಡಿರುತ್ತಾರೆ. ತಾವು ಈ ಕೆಲಸವನ್ನು ಮಾಡಿ, ಇಡಿ ನಮ್ಮ ಭರತ ಖಂಡದಲ್ಲಿ ಮಾನವ ಮಂತ್ರಿಗಳಾಗಬೇಕೆಂದು ಆಶಯವನ್ನಿಟ್ಟುಕೊಂಡಿದ್ದೇವೆ.

ಶ್ರೀ ಡಿ. ದೇವರಾಜ ಅರಸ್.—ಪೆಡ್ಯೂಲ್ ಕ್ಯಾಸ್ಟ್ ಮತ್ತು ಪೆಡ್ಯೂಲ್ ಟ್ರೈಬ್ಸ್ ರಿಸರ್ವೇಷನ್ ಮಾಡಬೇಕೆನ್ನುವುದು ಪ್ರಶ್ನೆ ಇರುತ್ತದೆ. ಆದರ ಜೊತೆಗೆ ಬ್ಯಾಕ್‌ವರ್ಡ್ ಕ್ಲಾಸಿಗೂ ರಿಸರ್ವೇಷನ್ ಮಾಡಬೇಕೆನ್ನುವುದು ಮತ್ತೊಂದು ಪ್ರಶ್ನೆ ಇರುತ್ತದೆ. ಕೇರಳ ಮುಂತಾದ ಕೆಲವು ಕಡೆಗಳಲ್ಲಿ ಮಾಡಿರುತ್ತಾರೆ. ಆದರೆ ಬ್ಯಾಕ್‌ವರ್ಡ್ ಕ್ಲಾಸಿಗೆ ಮಾಡಿಲ್ಲ. ನಮ್ಮಲ್ಲಿ ಎರಡನ್ನೂ ಮಾಡಬೇಕೆನ್ನುವುದು ಪ್ರಶ್ನೆಯಾಗಿರುತ್ತದೆ. ಅದಕ್ಕೆ ಸ್ವಲ ಸಮಸ್ಯೆಯು ಕಠಿಣವಾಗಿದೆ ಎಂದು ಹೇಳುವುದು. ಇದನ್ನು ಇನ್ನೂ ವಿಚಾರ ಮಾಡಬೇಕಾಗಿರುತ್ತದೆ. ಮಾತೆತ್ತಿದರೆ ನಿಮ್ಮ ಕಾಲದಲ್ಲಿ ನಮ್ಮ ಕಾಲದಲ್ಲಿ ಎಂದು ಹೇಳುತ್ತಿದ್ದೀರಿ. ಇನ್ನೊಂದು ಕಾಲ ಬಂದರೆ ಏನಾಗುತ್ತದೋ ನನಗೂ ಗೊತಿಲ್ಲ. ಇದನ್ನು ನನ್ನ ಕಾಲದಲ್ಲಿ ಮಾಡಲು ಪ್ರಯತ್ನ ಪಡುತ್ತೇನೆ.

ಬೆಳ್ಳಟ್ಟಿ ಮಾದರಿಯ ಕನ್ನಡ ಗಂಡು ಮಕ್ಕಳ ಶಾಲೆಯ ಮುಖ್ಯೋಪಾಧ್ಯಾಯರ ವೇತನ ಶ್ರೇಣಿ

೭೪೮. ಶ್ರೀ ವಿ. ವಿ. ವಾಯಿ (ಶಿರಹಟ್ಟಿ).—ಶಿಕ್ಷಣ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:—

(ಅ) ಧಾರವಾಡ ಜಿಲ್ಲಾ ಶಿರಹಟ್ಟಿ ತಾಲ್ಲೂಕು ಬೆಳ್ಳಟ್ಟಿ ಮಾದರಿಯ ಕನ್ನಡ ಗಂಡು ಮಕ್ಕಳ ಶಾಲೆಯಲ್ಲಿ ಶ್ರೀ ಎಸ್. ಎಂ. ಜೋಶಿ ಬಿ.ಎ ,ಬಿ.ಎಡ್. ಅಗಿ ೧೯೬೯ ರಿಂದ ಹೆಡ್ ಮಾಸ್ತರರಾಗಿ ಕೆಲಸ ಮಾಡುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೆ ;

(ಆ) ಇಂತಹವರು ಎಷ್ಟು ಜನ ಹೆಡ್ ಮಾಸ್ಟರರು ೧೯೬೦ ರ ಬಿ.ಎ.,ಬಿ.ಎಡ್. ಸ್ಕೇಲು ದೊರೆಯದೆ ಎಸ್.ಎಸ್.ಎಲ್.ಸಿ. ಸ್ಕೇಲು ಪಡೆದು ಕೆಲಸ ಮಾಡುತ್ತಿರುವರು ;

(ಇ) ಅವರಿಗಿಂತ ಜೂನಿಯರ್ಸ್‌ಗೆ ಬಡ್ತಿ ನೀಡಿರುವುದು ಅವರಿಗೆ ಬಿ.ಎ.,ಬಿ.ಎಡ್. ಪಗಾರ ದೊರೆಯದಿರುವುದು ನಿಜವಲ್ಲವೆ ;

(ಈ) ಈ ವಿಷಯದಲ್ಲಿ ಸರ್ಕಾರ ಆಸಕ್ತಿ ವಹಿಸಿ ಇಂತಹವರಿಗೆ ತ್ವರಿತ ಅವರಿಗೆ ದೊರೆಯುಬೇಕಾದ ಸ್ಕೇಲು ಮತ್ತಿತರ ಸೌಲಭ್ಯಗಳನ್ನು ಸರ್ಕಾರ ಕೊಡುವುದೆ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ (ಶಿಕ್ಷಣ ಮಂತ್ರಿಗಳು). —

(ಅ) ಬಂದಿದೆ.

(ಆ) ೩೨

(ಇ) ನಿಜವಲ್ಲ.

(ಈ) ಸರ್ಕಾರದ ಪರಿಶೀಲನೆಯಲ್ಲಿ ಇದೆ.

ಶ್ರೀ ವಿ. ವಿ. ವಾಯಿ.—ಧಾರವಾಡ ಜಿಲ್ಲಾ ಶಿರಹಟ್ಟಿ ತಾಲ್ಲೂಕು ಬೆಳ್ಳಟ್ಟಿ ಮಾದರಿಯ ಕನ್ನಡ ಗಂಡು ಮಕ್ಕಳ ಶಾಲೆಯಲ್ಲಿ ಶ್ರೀ ಎಸ್. ಎಂ. ಜೋಶಿಯವರು ೧೯೬೪ ನೇ ಇಸವಿಯಿಂದ ಹೆಡ್ ಮಾಸ್ಟರಾಗಿ ಕೆಲಸ ಮಾಡಿಕೊಂಡಿರುತ್ತಾರೆಂದು ತಿಳಿಸಿದ್ದೀನೆ. ಅವರು ೧೯೬೪ ರಿಂದ ಬಿ.ಎ.,ಬಿ.ಎಡ್. ಮಾಡಿ ಕೊಂಡು ಎಸ್.ಎಸ್.ಎಲ್.ಸಿ ಸ್ಕೇಲ್ ಪಡೆದು ಕೆಲಸಮಾಡುತ್ತಿದ್ದಾರೆ. ಈ ರೀತಿಯಾಗಿ ಕೆಲಸ ಮಾಡುತ್ತಿರುವವರು ಎಷ್ಟು ಜನ ಇದ್ದಾರೆಂದು ಕೇಳಿರುವುದಕ್ಕೆ ೩೨ ಜನರೆಂದು ಉತ್ತರದಲ್ಲಿ ಕೊಟ್ಟಿರುತ್ತೀರಿ: ಅದೇ ಈ ರೀತಿಯಾಗಿ ಎಸ್.ಎಸ್.ಎಲ್.ಸಿ ಸ್ಕೇಲನ್ನು ಪಡೆದು ಕೆಲಸಮಾಡುತ್ತಿರುವವರು ೭೦-೮೦ ಜನರು ಇರುತ್ತಾರೆ. ಆದ್ದರಿಂದ ಇದನ್ನು ಪುನಃ ಪರಿಶೀಲನೆ ಮಾಡುತ್ತೀರಾ ?

† ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ವಿ. ವಿ. ವಾಯಿ.—ಆ ಪ್ರಶ್ನೆಯ ಬಗ್ಗೆ ಅಸಕ್ತಿ ವಹಿಸಿ ಆದಷ್ಟು ಜಾಗ್ರತೆ ವಿಚಾರಣೆ ಮಾಡುವುದಕ್ಕೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಇದು ತೀವ್ರವಾದ ಪರಿಶೀಲನೆಯಲ್ಲಿದೆ ಎಂದು ಈಗಾಗಲೇ ಹೇಳಿದ್ದೇನೆ.

MADAM SPEAKER.—Now Questions are over

QUESTIONS FOR ANSWERS ON THE DAY
(but not taken up)

Acreage of ayacut under T.B. Project in Bellary and Raichur Districts

391. SRI B. SATYANARAYANA SINGH (Hospet).—Will the Ministes of State for Major and Medium Irrigation be pleased to state.—

(*a*) whether the Deputy Commissioner, Bellary is reported to have stated that exact number of acres under Tungabhadra Project was still not available, but vary from one Department of the Government to another;

(*b*) whether the Government intends to take steps to ascertain the exact acres under the T. B. P. ayacut ;

(c) the reasons for not knowing even after a lapse of 12 years of the completion of the project the exact acreage of the ayacut;

(d) the exact acreage of ayacut under the Tungabhadra Project in Bellary and Raichur Districts ?

SRI SUBASH ASTHURE (Minister of State for Major and Medium Irrigation).—

(a) No such report is received by Government.

(b) & (c) Question does not arise.

(d)—

		Acres
(1) Bellary District	...	2,65,053
(2) Raichur District	...	6,00,549

Finalisation of Inter-State seniority list

674. SRI A. A. DESAI (Athani)—

SRI H. T. KRISHNAPPA (Nagamangala).—Will the Chief Minister be pleased to state.—

(a) whether Government have finalised the I. S. S. lists of the following cadres.—

(1) Deputy Tahsildars.

(2) Junior Engineers and I Division Clerks of Public Works Department ;

(b) if not, the reason for the inordinate delay ?

SRI D. DEVARAJ URS.—(Chief Minister)

(a) Yes. The final I. S. S. lists have been published on the following dates.—

(1) Deputy Tahsildars on 31-10-1967 (Mysore Divison)

(2) Junior Engineers of Public Works Department on 26-12-1968

(3) I Division Clerks of Public Works Deparment on 28 3-1968.

(b) Does not arise.

Issue of N. O. C. to move rice from taluk to taluk

716. SRI B. SATHYANARAYANA SINGH (Hospet).—Will the Minister for Food and Civil Supplies be pleased to state :—

(a) whether it is a fact that in the Districts the competent authority for issue of 'No Objection Certificate' to move rice from one Taluk to another within District is the Tahsildar of the Taluk;

(*b*) whether it is a fact that in Bellary District alone, the issue of 'No Objection Certificate' for movement of rice from one Taluk to another has been retained with the Deputy Commissioner ; if so, what are the special reasons for this new procedure in Bellary District ?

SMT. E. E. VAZ (Minister for Food and Civil Supplies).—(*a*) No such restriction is imposed according to Karnataka Paddy (Regulation of Inter-District Movement) Control Order, 1975 Restrictions, if any, imposed are local arrangements for augmenting procurement operation. The Deputy Commissioners have been requested to discontinue such restrictions if imposed.

(*b*) Yes. To augment procurement operations in the District and to achieve the targets fixed for the District for the Crop Year 1975-76.

CALLING ATTENTION TO A MATTER OF URGENT PUBLIC IMPORTANCE.

re :— *Scarcity of drinking water in Dharwar District.*

SRI B. G. BANAKAR (Hirekerur).—I call the attention of the Minister for Public Works to the acute scarcity of drinking water in Dharwar District.

SRI M. MALLIKARJUNASWAMY (Minister for Education).—I wish to make the following Statement.

In Dharwar District, 430 bore-wells have been sunk so far in different talukas, of which 373 bore-wells are successful. In 253 cases hand pumps and in 12 cases power pumps have been fitted to the successful bore-wells. Action is being taken to fix hand pumps to the remaining successful bore-wells. Out of the 265 bore-wells which are fitted with handpumps/power-pumps, only 69 hand pumps and 12 power-pumps are in working condition and the remaining 184 cases are out of order. The main reason for the hand pumps going out of order is attributed to the rough handling of the hand pumps by the villagers.

Maintenance of the hand-pumps/power-pumps fitted to the bore-wells is the responsiblity of the local bodies concerned. In order to render effective service in the maintenance of the successful bore-wells, the Deputy Commissioners have been permitted to authorise the Taluk Development Boards to appoint a mechanic to each of the Taluk Development Board, in Government Circular No. RDC 237 VRW 75 dated 11th June 1975. The Deputy Commissioner, Dharwar

has intimated that the Taluk Development Boards of Hubli, Kalghatgi, Navalgund, Ron and Kundgol have so far appointed mechanics of their own. It is also stated that action is being taken to appoint a mechanic to each of the other Taluk Development Boards, where there are more than 25 bore-wells.

The Deputy Commissioner, Dharwar, has been requested to see that all the remaining Taluk Development Boards appoint a mechanic to each Taluk Development Boards immediately and to see that the remaining 184 hand pumps/powerpumps which are out of order are repaired and the bore-wells put into effective use for the benefit of the villagers. The Chief Engineer, Minor Irrigation and Public Health Engineering, Bangalore has also been requested to get the defunct handpumps/ power pumps repaired through his personnel, till the Taluk Development Boards appoint their own mechanics. The Public Health Engineering Department has also been requested to see that the remaining successful bore-wells are fitted with hand-pumps/power-pumps.

ಶ್ರೀ ಬಿ. ಜಿ. ಬಣಕಾರ್.—ಸ್ವಾಮಿ ಸರ್ಕಾರದವರು ೧೬ನೇ ಏಪ್ರಿಲ್ ೧೯೭೫, ೨೮ನೇ ಏಪ್ರಿಲ್ ೧೯೭೫ ಮತ್ತು ೧೧ನೇ ಜೂನ್ ೧೯೭೫ ಈ ಆರ್ಡರ್ ಪ್ರಕಾರ ಎಲ್ಲಾ ಜಿಲ್ಲಾಧಿಕಾರಿಗಳಿಗೂ ಮತ್ತು ಬಿ. ಡಿ. ಒ. ಗಳಿಗೂ ಬೋರ್‌ವೆಲ್ ರಿಪೇರಿ ಮಾಡುವುದಕ್ಕೆ ಮೆಕ್ಯಾನಿಕ್ ನೇಮಿಸಬೇಕೆಂದು ತಿಳಿಸಿದ್ದಾರೆ. ಆದಾಗ್ಯೂ ಧಾರವಾಡ ಜಿಲ್ಲೆಯಲ್ಲಿ ಇರುವ ೧೭ ತಾಲ್ಲೂಕುಗಳಲ್ಲಿ ೫ ತಾಲ್ಲೂಕುಗಳಲ್ಲಿ ಮಾತ್ರ ಬಿ. ಡಿ. ಒ. ಅವರು ಮೆಕ್ಯಾನಿಕ್‌ಗಳನ್ನು ನೇಮಿಸಿದ್ದಾರೆ. ಇನ್ನು ೧೨ ತಾಲ್ಲೂಕುಗಳಲ್ಲಿ ಮೆಕ್ಯಾನಿಕ್‌ಗಳನ್ನು ನೇಮಿಸಿಲ್ಲ. ಸರ್ಕಾರದವರಿಂದ ಮೆಕ್ಯಾನಿಕ್‌ಗಳನ್ನು ನೇಮಿಸಬೇಕು ಎಂದು ಆಜ್ಞೆ ಮಾಡಿದರೂ ಕೂಡ ಅಧಿಕಾರಿಗಳು ಬೇಜವಾಬ್ದಾರಿಯಿಂದ ಮೆಕ್ಯಾನಿಕ್‌ಗಳನ್ನು ನೇಮಿಸಿಲ್ಲ. ಆದ್ದರಿಂದ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶವನ್ನು ಕೊಟ್ಟು ತೀವ್ರವಾಗಿ ಕೆಟ್ಟು ಹೋಗಿರತಕ್ಕ ಪಂಪುಸೆಟ್ಟುಗಳನ್ನು ರಿಪೇರಿ ಮಾಡಿದ್ದರೆ ಅವರ ಮೇಲೆ ಕ್ರಮತೆಗೆದುಕೊಳ್ಳುತ್ತೀರಾ ? ಈಗ ತಾವು ೩ ಸರ್ಕ್ಯುಲರ್‌ಗಳನ್ನು ಅಧಿಕಾರಿಗಳಿಗೆ ಕಳುಹಿಸಿದ್ದೀರಿ, ಇನ್ನು ೧೦ ಸರ್ಕ್ಯುಲರ್ ಕಳುಹಿಸಿದರೂ ಕೂಡ ಅಧಿಕಾರಿಗಳು ಆ ಕೆಲಸವನ್ನು ಮಾಡುವುದಿಲ್ಲ, ಆದ್ದರಿಂದ ಅಧಿಕಾರಿಗಳು ಸರ್ಕಾರದ ಆದೇಶವನ್ನು ಮೀರಿ ನಡೆದರೆ ಅದಕ್ಕೆ ಏನು ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ :—ಮೊನ್ನೆ ಮಾನ್ಯ ಸದಸ್ಯರಾದ ಶ್ರೀ ವಾಯಿ ಅವರು ಇದೇ ಪ್ರಶ್ನೆಯನ್ನು ಈ ಸಭೆಯಲ್ಲಿ ತಂದಾಗ ಇದೇ ಸಭೆಯಲ್ಲಿ ನಾನು ಒಂದು ಆಶ್ವಾಸನೆಯನ್ನು ಕೊಟ್ಟಿದ್ದೇನೆ ಎಲ್ಲಾ ಜಿಲ್ಲಾಧಿಕಾರಿಗಳಿಗೂ ಕೂಡ ಅಧಿಕಾರ ಕೊಟ್ಟು ತಕ್ಷಣ ಎಲ್ಲೆಲ್ಲಿ ಮೆಕ್ಯಾನಿಕ್‌ಗಳನ್ನು ಅಪಾಯಿಂಟ್ ಮಾಡಿಲ್ಲ, ಅಲ್ಲಿ ಮೆಕಾನಿಕ್‌ಗಳನ್ನು ಅಪಾಯಿಂಟ್ ಮಾಡತಕ್ಕದ್ದು ಎಂದು ಎಲ್ಲ ಜಿಲ್ಲಾಧಿಕಾರಿಗಳಿಗೂ ಸರ್ಕ್ಯುಲರ್ ಕಳಿಸಿದೆ ಲೋಕಲ್ ಬಾಡಿಗಳವರು ರೆಸಂಪ್ಷನ್ ಮಾಡಿ ಮೆಕ್ಯಾನಿಕ್‌ಗಳನ್ನು ನೇಮಕ ಮಾಡಿಕೊಳ್ಳಬೇಕಾಗಿದೆ. ಇದರಿಂದಾಗಿ ಸ್ವಲ್ಪಮಟ್ಟಿಗೆ ಕಾಲ ವಿಳಂಬವಾಗಿದೆ. ಆ ರೀತಿ ವಿಳಂಬ ಮಾಡಿರತಕ್ಕದ್ದು ತಪ್ಪು. ಇನ್ನು ಮುಂದೆ ಅದನ್ನು ವಿಳಂಬ ಮಾಡಕೂಡದು ಎಂದು ಆದೇಶವನ್ನು ಕೊಟ್ಟಿದ್ದೇವೆ. ತೊಂದರೆಯನ್ನು ಪರಿಹಾರ ಮಾಡುವುದಕ್ಕೋಸ್ಕರ ಚೀಫ್ ಇಂಜಿನಿಯರ್ ನೇರವಾಗಿ ಸೂಕ್ತ ಕಾರ್ಯಕ್ರಮತೆಗೆದುಕೊಂಡು ಎಷ್ಟು ಬೋರ್‌ವೆಲ್‌ಗಳು ಚಾಲನೆಯಲ್ಲಿಲ್ಲವೋ ಅವುಗಳನ್ನು ರಿಪೇರಿ ಮಾಡತಕ್ಕದ್ದು ಎಂದು ಹುಕುಂ ಕೊಟ್ಟಿದ್ದೇವೆ.

Business of the House

MADAM SPEAKAR.—The calling attention notices given notice of by Sri K. H. Hanume Gowda, Sri T. R. Shamanna and others will be taken up tomorrow.